Shri. Hamid Ansari's wishes in RVCE Golden Jubilee

ಆರ್.ವಿ. ಕಾಲೇಜಿನ ಸುವರ್ಣ ಸಂಭ್ರಮದಲ್ಲಿ ಉಪ ರಾಷ್ಟ್ರಪತಿ ಹಮೀದ್ ಅನ್ಸಾರಿ ಆಶಯ

ಉನ್ನತ ಶಿಕ್ಷಣದಲ್ಲಿ ಹಳೆ ಪಠ್ಯಕ್ರಮ ಅಂತ್ಯವಾಗಲಿ

ವಿಕ ಚಿತ್ರಲೋಕ

ನಗರದ ಆರ್ ಏ ಎಂಜಿನಿಯರಿಂಗ್ ಕಾಲೇಜಿನ ಸುವರ್ಣ ಮಹೋತ್ಸವ ಸಮಾರಂಭದಲ್ಲಿ ರಾಜ್ಯಪಾಲ ವಜುಭಾಯಿ ವಾಲಾ ಅವರೊಂದಿಗೆ ಚರ್ಚೆಯಲ್ಲಿ ನಿರತರಾಗಿರುವ ಸಚಿವ ಆರ್ ಏ ದೇಶಪಾಂಡೆ. ಉಪ ರಾಷ್ಟ್ರಪತಿ ಹಮೀದ್ ಅನ್ಸಾರಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಸ್ಥಿತರಿದ್ದರು.

ಸುದ್ದಿಲೋಕ ಬೆಂಗಳೂರು

ಉನ್ನತ ಶಿಕ್ಷಣ ಕ್ಷೇತ್ರವು ಲಭ್ಯತೆ, ಸಮತೆ ಹಾಗೂ ...ಟ್ಟದಂತಹ ಪ್ರಮುಖ ಮೂರು ಸಮಸ್ಯೆಗಳಿಂದ ...ತ್ತಿದ್ದು ಜಾಗತಿಕ ಮಾರುಕಟ್ಟೆಯಲ್ಲಿ ನಮ್ಮ ...ಕರಿಗೆ ಉದ್ಯೋಗಾವಕಾಶ ಲಭಿಸಲು ಅಪ್ರ ...ಗಿದೆ. ಹಾಗಾಗಿ ಓಬಿರಾಯನ ಕಾಲದ ಪಠ್ಯಕ್ರಮ ...ಂಜಲಿ ಹಾಡಬೇಕಿದೆ ಎಂದು ಉಪ ರಾಷ್ಟ್ರಪತಿ ...ಮೀದ್ ಅನ್ಸಾರಿ ಕರೆ ನೀಡಿದರು.

...ರದ ಆರ್.ವಿ. ಎಂಜಿನಿಯರಿಂಗ್ ಕಾಲೇಜಿನ ...ರ್ ಮಹೋತ್ಸವ ಸಮಾರಂಭವನ್ನು ಮಂಗಳ ...ದ್ಘಾಟಿಸಿ ಮಾತನಾಡಿದ ಅವರು, ''ಒಂದೆಡೆ ...ಲಭೂತ ಸೌಕರ್ಯ, ಗುಣಮಟ್ಟದ ಕೊರತೆ ಹಾಗೂ ...ಮತ್ತು ಅಪ್ರಸ್ತುತ ಪಠ್ಯಕ್ರಮದಿಂದ ಪ್ರತಿ ವರ್ಷ ...ಲಕ್ಷ ಮಂದಿ ವಿಜ್ಞಾನ ಹಾಗೂ ಎಂಜಿನಿಯರಿಂಗ್ ...ಧರರು ಕಾಲೇಜುಗಳಿಂದ ಹೊರ ಬರುತ್ತಿದ್ದರೂ ...ತರಬೇತಿ ಕೊರತೆಯಿಂದ ಶೇ 25ರಷ್ಟು ಮಂದಿ ...ಉದ್ಯೋಗಾವಕಾಶ ಪಡೆಯುವ ಅರ್ಹತೆ ಪಡೆ ...ತ್ತಿದ್ದಾರೆ,'' ಎಂದು ವಿಷಾದಿಸಿದರು.

...ತ್ತೀಚಿನ ವರ್ಷಗಳಲ್ಲಿ ಉನ್ನತ ಶಿಕ್ಷಣ ವ್ಯಾಸಂಗಕ್ಕೆ ...ಶ ಪಡೆಯುವವರ ಸಂಖ್ಯೆ ವಿಪರೀತ ಪ್ರಮಾಣ ...ಹೆಚ್ಚುತ್ತಿರುವುದರಿಂದ ಮೂಲಭೂತ ಸೌಕರ್ಯ ಕಲ್ಪಿ ...ದು ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳಿಗೆ ...ಷ್ಟ ಸವಾಲಾಗಿ ಪರಿಣಮಿಸಿದೆ. ಕಾಲೇಜು ಕೊಠಡಿ ... ಹಾಗೂ ಪ್ರಯೋಗಾಲಯಗಳು. ವಿದ್ಯಾರ್ಥಿಗ ...ತುಂಬಿ ತುಳುಕುತ್ತಿರುವುದರಿಂದ ವಿದ್ಯಾರ್ಥಿಗಳು ...ಂ ಅಧ್ಯಾಪಕರ ನಡುವಿನ ಅಂತರ ಹೆಚ್ಚಾಗಿ ಗುಣ ಮಟ್ಟದ ಶಿಕ್ಷಣ ನೀಡಲು ಸಾಧ್ಯವಾಗುತ್ತಿಲ್ಲ. ಈ ಎಲ್ಲ ಸಮಸ್ಯೆಗಳಿಗೆ ನಾವು ತುರ್ತು ಪರಿಹಾರ ಕಂಡುಕೊಳ್ಳಬೇಕಿದೆ,'' ಎಂದು ಸಲಹೆ ಮಾಡಿದರು.

ಉನ್ನತ ಶಿಕ್ಷಣ ಮಹಿಳೆಯರಿಂದ ಇನ್ನೂ ದೂರ: ''ನಮ್ಮ ರಾಷ್ಟ್ರೀಯ ಸರಾಸರಿಗೆ ಹೋಲಿಸಿದರೆ ಗ್ರಾಮೀಣ ಭಾಗದ ಮಹಿಳೆಯರು ಉನ್ನತ ಶಿಕ್ಷಣ ಕ್ಷೇತ್ರದಿಂದ ದೂರ ಉಳಿಯುತ್ತಿದ್ದಾರೆ. ಈ ತಾರತಮ್ಯ ಹೋಗಲಾಡಿಸುವ ನಿಟ್ಟಿನಲ್ಲಿ ಸರಕಾರಗಳು ಪ್ರಯತ್ನ ನಡೆಸಬೇಕಾಗಿದೆ,'' ಎಂದರು.

''ಪ್ರಜಾಪ್ರಭುತ್ವದ ಬಲವರ್ಧನೆ, ಸಮಾಜದಲ್ಲಿ ಸಾಮರಸ್ಯ ಕಾಪಾಡಲು ಹಾಗೂ ದೇಶದ ಆರ್ಥಿಕ ಸದೃಢತೆಗೆ ಶಿಕ್ಷಣ ಮುಖ್ಯ ಸಾಧನ. 2011ರಲ್ಲಿ ದೇಶದ ಜನಸಂಖ್ಯೆಯ ಶೇ 50ರಷ್ಟು ಮಂದಿ 24 ವರ್ಷ ವಯಸ್ಸಿನೊಳಗಿನ ಯುವಕರಿದ್ದರೆ, 2020ರ ವೇಳೆಗೆ ಈ ಪ್ರಮಾಣ ಮೂರನೇ ಎರಡು ಭಾಗದಷ್ಟಾಗಲಿದೆ. ಮುಂದಿನ 20 ವರ್ಷಗಳಲ್ಲಿ ದೇಶದಲ್ಲಿ ದುಡಿಯುವ ಕೌಶಲ ಶಕ್ತಿ ಹೆಚ್ಚಿದರೆ, ಅದು ಚೀನಾ ಸೇರಿದಂತೆ ಮತ್ತಿತರ ಕೈಗಾರಿಕಾ ದೇಶಗಳಲ್ಲಿ ಬಹಳಷ್ಟು ಕಡಿಮೆಯಾಗಲಿದೆ. ಈ ನಿಟ್ಟಿನಲ್ಲಿ ಆರೋಗ್ಯ, ಶಿಕ್ಷಣ ಹಾಗೂ ಕೌಶಲ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುವುದರ ಜತೆಗೆ, ಯುವಕರಿಗೆ ಉತ್ತಮ ಉದ್ಯೋಗಾವಕಾಶ ಒದಗಿಸಿಕೊಡುವುದರ ಮೂಲಕ ಅವರ ಆಕಾಂಕ್ಷೆಗಳನ್ನು ಈಡೇರಿಸಲು ಆದ್ಯತೆ ನೀಡಬೇಕಾಗಿದೆ,'' ಎಂದರು.

ಗುಣಮಟ್ಟಕ್ಕೆ ಒತ್ತು ನೀಡದಿದ್ದರೆ ಕಿಮ್ಮತ್ತಿಲ್ಲ: ರಾಜ್ಯಪಾಲ ವಜುಭಾಯಿ ವಾಲಾ, ''ದಕ್ಷಿಣ ಭಾರತದ ಯುವ ವರ್ಗಕ್ಕೆ ದೇಶದ ಭವಿಷ್ಯ ಬದಲಿಸುವ ಶಕ್ತಿ ಇದೆ. ಹೀಗಾಗಿ, ನಾವು ಗುಣಾತ್ಮಕ ಶಿಕ್ಷಣಕ್ಕೆ ಒತ್ತು ನೀಡಬೇಕಿದೆ. ಇಲ್ಲದಿದ್ದರೆ ಅಂತಹ ಶಿಕ್ಷಣಕ್ಕೆ ಯಾವುದೇ ಕಿಮ್ಮತ್ತು ಇರುವುದಿಲ್ಲ'' ಎಂದರು.

ಸಮಾರಂಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ''ಜಾಗತಿಕ ಮಾರುಕಟ್ಟೆಯಲ್ಲಿ ನಮ್ಮ ಯುವಕರಿಗೆ ಉದ್ಯೋಗಾವಕಾಶ ದೊರಕಿಸಿಕೊಡುವ ನಿಟ್ಟಿನಲ್ಲಿ ಅವರನ್ನು ಸ್ಪರ್ಧಾತ್ಮಕವಾಗಿ ಸಜ್ಜುಗೊಳಿಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಸರಕಾರ ಗುಣಾತ್ಮಕ ಶಿಕ್ಷಣಕ್ಕೆ ಒತ್ತು ನೀಡುವುದರ ಜತೆಗೆ ಕಾಲೇಜುಗಳಲ್ಲಿ ಮೂಲಸೌಕರ್ಯ ಕಲ್ಪಿಸಲು ಪ್ರಯತ್ನಿಸುತ್ತಿದೆ,'' ಎಂದರು.

'ಸ್ಪಂದನ' ಸ್ಮರಣ ಸಂಚಿಕೆ ಬಿಡುಗಡೆ ಮಾಡಿ ಮಾತನಾಡಿದ ಉನ್ನತ ಶಿಕ್ಷಣ ಸಚಿವ ಆರ್.ವಿ. ದೇಶಪಾಂಡೆ, '' ನಾವು ಇಂದು ಸ್ಪರ್ಧಾತ್ಮಕ ಯುಗದಲ್ಲಿದ್ದೇವೆ. ಕೇವಲ ಕರ್ನಾಟಕ ಮಾತ್ರವಲ್ಲದೆ, ವಿಶ್ವದ ಇತರ ದೇಶಗಳೊಂದಿಗೆ ಸ್ಪರ್ಧೆ ಎದುರಿಸಬೇಕಿದೆ. ಇದನ್ನು ಗಮನದಲ್ಲಿರಿಸಿಕೊಂಡು ಗುಣಾತ್ಮಕ ಶಿಕ್ಷಣಕ್ಕೆ ಆದ್ಯತೆ ನೀಡಬೇಕಾಗಿದೆ. ಎಷ್ಟು ಮಂದಿ ಎಂಜಿನಿಯರಿಂಗ್ ಪದವೀಧರರನ್ನು ತಯಾರು ಮಾಡುತ್ತೇವೆ ಎನ್ನುವುದಕ್ಕಿಂತ ಎಷ್ಟು ಜನರಿಗೆ ಉದ್ಯೋಗಾವಕಾಶ ಕಲ್ಪಿಸುತ್ತಿದ್ದೇವೆ ಎಂಬುದು ಮುಖ್ಯವಾಗಬೇಕು. ಇದರಿಂದ ದೇಶದ ಅಭಿವೃದ್ಧಿಗೂ ಒಳಿತಾಗಲಿದೆ,'' ಎಂದು ಅಭಿಪ್ರಾಯಪಟ್ಟರು.

ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್ ಅಧ್ಯಕ್ಷ ಡಾ.ಎಂ.ಕೆ. ಪಾಂಡುರಂಗಶೆಟ್ಟಿ ಸ್ವಾಗತಿಸಿದರು. ಕಾಲೇಜಿನ ಪ್ರಿನ್ಸಿಪಾಲ್ ಡಾ.ಬಿ.ಎಸ್. ಸತ್ಯನಾರಾಯಣ ವಂದಿಸಿದರು.

ವಿಜಯ ಕರ್ನಾಟಕ
7ನೇ ಫೆಬ್ರವರಿ 2015